2017 ಕ.ತೀ.ವ 58

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್

ಸತ್ಯಂ ಕಾಲೇಜ್ ಆಫ್ ಏಜುಕೇಷನ್ –ವಿರುದ್ಧ– ಸದಸ್ಯ ಕಾರ್ಯದರ್ಶಿ, ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್ ಮತ್ತು ಇತರರು*

ಭಾರತದ ಸಂವಿಧಾನ ಅನುಚ್ಛೇದ 226ರ ಅಡಿ ಅರ್ಜಿ

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರ ಸಂಸ್ಥೆಯ ಬಿ.ಎಡ್. ಕೋರ್ಸಿನ ಮಾನ್ಯತೆಯನ್ನು ರದ್ದು ಮಾಡಿರುವ ಆದೇಶವನ್ನು ಪ್ರಶ್ನಿಸುತ್ತಾ ಪ್ರಸ್ತುತ ಕೋರ್ಸಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಪರವಾನಿಗೆಯನ್ನು ಸಹ ನೀಡಲು ಕೋರಿ ರಿಟ್ ಅರ್ಜಿ ಸಲ್ಲಿಸಲಾಗಿದೆ. ಮಾನ್ಯ ನ್ಯಾಯಾಲಯವು ಈ ಪ್ರಕರಣದಲ್ಲಿನ ಪ್ರತ್ಯರ್ಜಿದಾರರ ತಕರಾರನ್ನು ಕೂಲಂಕುಶವಾಗಿ ಪರಿಗಣಿಸಿ, ಈ ಕೆಳಗಿನಂತೆ ನಿರ್ಣಯ ನೀಡಿದೆ.

ಅರ್ಜಿದಾರ ಸಂಸ್ಥೆಯು ಬಿ.ಎಡ್. ಕೋರ್ಸಿಗೆ ಮಾನ್ಯತೆಯನ್ನು ಹೊಂದದೇ ಇರುವುದರಿಂದ ವಿದ್ಯಾರ್ಥಿಗಳ ದಾಖಲಾತಿಗೆ ಅನುಮತಿ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಅಲ್ಲದೇ ಮುಂದಿನ ಶೈಕ್ಷಣಿಕ ವರ್ಷಕ್ಕೆ ಮಾನ್ಯತೆ ನೀಡಿಕೆಗಾಗಿ ಅರ್ಜಿದಾರ ಸಂಸ್ಥೆಯ ಅರ್ಜಿಯನ್ನು ಸೂಕ್ತ ಕಾನೂನಿನ ನಿಯಮಗಳಂತೆ ಪರಿಗಣಿಸಲು ನಿರ್ದೇಶನ ನೀಡಿ ಪ್ರಸ್ತುತ ರಿಟ್ ಅರ್ಜಿಯನ್ನು ವಿಲೆಗೊಳಿಸಿದೆ.

ಅರ್ಜಿದಾರರ ಪರ: ಶ್ರೀ ಎಸ್.ಎಸ್. ಯಡ್ರಾಮಿ, ನ್ಯಾಯವಾದಿ.
ಎದುರುದಾರರ ಪರ: ಶ್ರೀ ಎಂ.ಬಿ. ಕಣವಿ, ನ್ಯಾಯವಾದಿ.

*ರಿಟ್ ಅರ್ಜಿ ಸಂಖ್ಯೆ: 109563/2014, ದಿನಾಂಕ: 29ನೇ ಅಕ್ಟೋಬರ್, 2014.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್:**

ಈ ವಿಷಯವು ಆದೇಶ ನೀಡುವುದಕ್ಕೆ ಸಂಬಂಧಿಸಿದ ಪಟ್ಟಿಯಲ್ಲಿದ್ದು, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಮ್ಮತಿಯಿಂದ ಇದನ್ನು ಅಂತಿಮ ವಿಚಾರಣೆಗೆ ಎತ್ತಿಕೊಂಡು ಅಹವಾಲನ್ನು ಆಲಿಸಿ, ಈ ಆದೇಶದ ಮೂಲಕ ವಿಲೆ ಮಾಡಲಾಗಿದೆ.

2. ಅರ್ಜಿದಾರರು ಬಿ.ಎಡ್. ಪದವಿ ಶಿಕ್ಷಣವನ್ನು ನೀಡುವ ಒಂದು ಶಿಕ್ಷಣ ಸಂಸ್ಥೆಯಾಗಿದೆ. ಇದನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆಯಿಂದ 2005ನೇ ಇಸವಿಯಲ್ಲಿ ಸ್ಥಾಪಿಸಲಾಗಿದೆ. ಎರಡನೇ ಎದುರುದಾರರು ಅರ್ಜಿದಾರ ಕಾಲೇಜಿಗೆ ಮಂಜೂರು ಮಾಡಿರುವ ಮನ್ನಣೆಯನ್ನು ಹಿಂಪಡೆದು ಅನುಬಂಧ–ಡಿ ಯಲ್ಲಿರುವ ದಿನಾಂಕ 07.06.2013ರ ಆದೇಶವನ್ನು ಹೊರಡಿಸಿದ್ದರು. ಈ ಆದೇಶವನ್ನು ಅರ್ಜಿದಾರರು ನವದೆಹಲಿಯ ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಶನ್ (ಸಂಕ್ಷಿಪ್ತವಾಗಿ 'ಎನ್‌ಸಿಟಿಇ') ಮುಂದೆ ಮೇಲ್ಮನವಿಯನ್ನು ಸಲ್ಲಿಸುವ ಮೂಲಕ ಪ್ರಶ್ನಿಸಿದ್ದರು. ಎನ್‌ಸಿಟಿಇ ಯು ಅನುಬಂಧ–ಡಿ ಆದೇಶವನ್ನು ತಳ್ಳಿಹಾಕಿ ಆದೇಶ ಹೊರಡಿಸಿತ್ತು. ವಿಷಯವನ್ನು ಕಾನೂನಿಗನುಗುಣವಾಗಿ ಹೊಸದಾಗಿ ಪರಿಗಣಿಸುವಂತೆ ತಿಳಿಸಿ 2ನೇ ಎದುರುದಾರರಿಗೆ ವಾಪಸ್ ಕಳುಹಿಸಿತ್ತು. 28.04.2014ರಂದು ಅನುಬಂಧ –ಎಫ್ ನಲ್ಲಿರುವ ಆದೇಶವನ್ನು ಹೊರಡಿಸಿದ್ದರೂ, ಅನುಬಂಧ–ಜಿ ನಲ್ಲಿರುವಂತೆ ಮನವಿಯನ್ನು ಸಲ್ಲಿಸಿದರೂ 2ನೇ ಎದುರುದಾರರು ವಿಷಯವನ್ನು ಪುನರ್ ಪರಿಗಣನೆ ಮಾಡಲಿಲ್ಲ. ಆದ್ದರಿಂದ, ಅರ್ಜಿದಾರರು 2014–15ನೇ ಶೈಕ್ಷಣಿಕ ವರ್ಷದ ಬಿ.ಎಡ್. ಕೋರ್ಸ್‌ಗೆ ಆಡಳಿತ ಮಂಡಳಿಯ ಕೋಟಾದ ಸೀಟುಗಳನ್ನು ಮತ್ತು ಸರ್ಕಾರಿ ಕೋಟಾದ ಸೀಟುಗಳನ್ನು ಭರ್ತಿ ಮಾಡಲು ಅರ್ಜಿದಾರರಿಗೆ ಅವಕಾಶ ನೀಡಲು 1ನೇ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

3. ನಾನು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ್ದೇನೆ.

4. ಅರ್ಜಿದಾರ–ಕಾಲೇಜಿಗೆ ಮಂಜೂರು ಮಾಡಿದ್ದ ಮನ್ನಣೆಯನ್ನು ಹಿಂಪಡೆದು 2ನೇ ಎದುರುದಾರರು ಅನುಬಂಧ–ಡಿ ಯಲ್ಲಿರುವಂತೆ ಹೊರಡಿಸಿದ ಆದೇಶವನ್ನು ಅನುಬಂಧ–ಎಫ್‌ನಲ್ಲಿರುವ ದಿನಾಂಕ 28.04.2014ರ ತನ್ನ ಆದೇಶದ ಮೂಲಕ ಮೇಲ್ಮನವಿ ಪ್ರಾಧಿಕಾರವು ತಳ್ಳಿಹಾಕಿದೆಯೆಂಬುದು ಸ್ಪಷ್ಟವಾಗಿದೆ. ಮೇಲ್ಮನವಿ ಪ್ರಾಧಿಕಾರವು ಅದರಲ್ಲಿ ನೀಡಿದ ನಿರ್ಣಯಗಳಿಗನುಸಾರವಾಗಿ ವಿಷಯವನ್ನು ಹೊಸದಾಗಿ ಪರಿಗಣಿಸುವಂತೆ ತಿಳಿಸಿ 2ನೇ ಎದುರುದಾರರಿಗೆ ಹಿಂದಿರುಗಿಸಿದೆ. 2ನೇ ಎದುರುದಾರರು ಆ ಕೂಡಲೇ ವಿಷಯವನ್ನು ಪರಿಗಣಿಸಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯವಾಗಿದೆ.

5. ಎರಡನೇ ಪ್ರಶ್ನೆಯೇನೆಂದರೆ, 2014–15ನೇ ಶೈಕ್ಷಣಿಕ ವರ್ಷಕ್ಕೆ ಬಿ.ಎಡ್. ಕೋರ್ಸ್‌ಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅರ್ಜಿದಾರರಿಗೆ ಅನುಮತಿ ನೀಡಬಹುದೇ? ಎಂಬುದಾಗಿದೆ. ಈಗಾಗಲೇ ಒಪ್ಪಿಕೊಳ್ಳಲಾಗಿರುವಂತೆ, 2014–15ನೇ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅರ್ಜಿದಾರ ಕಾಲೇಜಿಗೆ 2ನೇ ಎದುರುದಾರರು ಮನ್ನಣೆಯನ್ನು ನೀಡಿಲ್ಲ. ಒಂದು ನಿರ್ದಿಷ್ಟ ಕೋರ್ಸ್‌ಅನ್ನು ನಡೆಸಲು ಒಂದು ಸಂಸ್ಥೆಯು ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು ಸಾಧ್ಯವಿಲ್ಲವೆಂಬುದು ಈಗಾಗಲೇ ಸುಸ್ಥಾಪಿತವಾಗಿರುವ ಅಂಶವಾಗಿದೆ. 2014–15ರ ಶೈಕ್ಷಣಿಕ ವರ್ಷಕ್ಕೆ ಬಿ.ಎಡ್. ಕೋರ್ಸ್‌ಗೆ ಪ್ರವೇಶಾತಿಯ ಅಂತಿಮ ದಿನಾಂಕವು 18.10.2014 ಎಂಬ ಬಗ್ಗೆ ಯಾವುದೇ ತಕರಾರಿಲ್ಲ. ಪರಿಸ್ಥಿತಿಗಳ ಈ ಹಿನ್ನೆಲೆಯಲ್ಲಿ ಅರ್ಜಿದಾರರು 2014–15ನೇ ಶೈಕ್ಷಣಿಕ ವರ್ಷಕ್ಕೆ ಸರ್ಕಾರಿ ಕೋಟಾದಲ್ಲಾಗಲಿ ಅಥವಾ ಆಡಳಿತ ಮಂಡಳಿಯ ಕೋಟಾದಲ್ಲಾಗಲಿ ವಿದ್ಯಾರ್ಥಿಗಳಿಗೆ ಬಿ.ಎಡ್. ಕೋರ್ಸ್‌ಗೆ ಪ್ರವೇಶ ನೀಡಲು ಸಾಧ್ಯವಿಲ್ಲ.

6. ಆದ್ದರಿಂದ, ನಾನು, ಈ ಆದೇಶದ ಪ್ರತಿ ತಲುಪಿದ ದಿನಾಂಕದಿಂದ ಆರು ವಾರಗಳೊಳಗಾಗಿ ಕಾನೂನಿಗನುಸಾರವಾಗಿ ಮತ್ತು ಅನುಬಂಧ–ಎಫ್ ನಲ್ಲಿನ ದಿನಾಂಕ 28.04.2014ರ ಆದೇಶದಲ್ಲಿ 1ನೇ ಎದುರುದಾರರು ನೀಡಿದ ನಿರ್ಣಯಗಳನ್ನು ಆಧರಿಸಿ ವಿಷಯವನ್ನು ಪರಿಶೀಲಿಸುವಂತೆ ಎರಡನೇ ಎದುರುದಾರರಿಗೆ ನಿರ್ದೇಶಿಸುತ್ತಿದ್ದೇನೆ. ತದನುಸಾರವಾಗಿ ರಿಟ್ ಅರ್ಜಿಯು ವಿಲೆಯಾಗಿದೆ. ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲ.